# <u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮೂಡಬಿದ್ರೆ</u>

<u>ಸಿ.ಸಿ.ನಂಃ**381/2024**</u>

ಪಿರ್ಯಾದುದಾರರು ಃ ರಾಜ್ಯದ ಪರವಾಗಿಃ ಪೊಲೀಸ್ ಉಪ-ನಿರೀಕ್ಷಕರು
ಮೂಡಬಿದ್ರೆ ಪೊಲೀಸ್ ಠಾಣೆ

**-ವಿರುದ್ಧ-**

ಆರೋಪಿತರು ಃ ಸಂದೀಪ್
ಪ್ರಾಯ 34 ವರ್ಷ,
ಬಿನ್ ದಿವಂಗತ ಭುಜಂಗ ಪೂಜಾರಿ,
<u>ವಾಸಃ</u> C/o ಯೊಗೀಶ್ ಶೆಟ್ಟಿ,
ಶಾಂತಿರಾಜ್ ಕಾಲೊನಿ,
ಪುಚ್ಚಮೊಗರು ಗ್ರಾಮ,
ಮೂಡಬಿದ್ರೆ ತಾಲೂಕು.

## ಃ<u>ದೋಷಾರೋಪಣೆಃ</u>

**ಶ್ರೀ ಕಾವೇರಮ್ಮ ಎಂ.,** ಬಿ.ಎ., ಎಲ್.ಎಲ್.ಬಿ, ಸಿವಿಲ್ ನ್ಯಾಯಧೀಶರು ಮತ್ತು ಜೆ.ಎಂ.ಎಫ್.ಸಿ., ಮೂಡಬಿದ್ರೆ ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಗಳನ್ನು ನಿರೂಪಿಸುತ್ತಿದ್ದೇನೆ.

ದಿನಾಂಕ 15-04-2024 ರಂದು 00.25 ಗಂಟೆಯ ಸಮಯದಲ್ಲಿ ಮೂಡಬಿದ್ರೆ ಠಾಣಾ ವ್ಯಾಪ್ತಿಯ ಮೂಡಬಿದ್ರೆ ತಾಲ್ಲೂಕು, ಮೂಡುಮಾರ್ನಾಡು ಗ್ರಾಮದ ಮುರಗೋಳಿ ಜಿ.ಕೆ.ಗಾರ್ಡನ್ ಎಂಬಲ್ಲಿ ಡೆಕೊರೇಶನ್ ಕೆಲಸ ಮಾಡಿಕೊಂಡಿದ್ದ 1ನೇ ಸಾಕ್ಷಿದಾರರಾದ ರಾಯನ್ ಪಿಂಟೊ ರವರೊಂದಿಗೆ ಅಲ್ಲಿಯೇ ಎಲೆಕ್ಟ್ರೀಷಿಯನ್ ಕೆಲಸ ಮಾಡಿಕೊಂಡಿದ್ದ ನೀವು 1ನೇ ಸಾಕ್ಷಿದಾರರನ್ನು ಉದ್ದೇಶಿಸಿ "ಬೇವರ್ಸಿ, ರಂಡೇ ಮಗ" ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಆದ್ದರಿಂದ, ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 504 ರಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ನೀವು ಅಲ್ಲಿದ್ದ ಪೈಬರ್ ಕುರ್ಚಿಯಿಂದ 1ನೇ ಸಾಕ್ಷಿದಾರರ ತಲೆಗೆ ಹಲ್ಲೆ ಮಾಡಿದ ಪರಿಣಾಮ 1ನೇ ಸಾಕ್ಷಿದಾರರಿಗೆ ಸಾಮಾನ್ಯ ಸ್ವರೂಪದ ಗಾಯ ನೋವು ಉಂಟಾಗಲು ಕಾರಣರಾಗಿರುತ್ತೀರಿ. ಆದ್ದರಿಂದ, ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 324 ರಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಮೇಲ್ಕಂಡ ನಿಮ್ಮ ಮೇಲಿನ ಆರೋಪಗಳ ಬಗ್ಗೆ ವಿಚಾರಣೆಯಾಗಲು ಈ ಮೂಲಕ ಆದೇಶಿಸುತ್ತೇನೆ.

ಸಹಿ/-

ದಿನಾಂಕಃ **16-10-2024**

**(ಕಾವೇರಮ್ಮ ಎಂ.)**
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಮೂಡಬಿದ್ರೆ

<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಮೂಡಬಿದ್ರೆ</u>

<u>ಸಿ.ಸಿ.ನಂಃ381/2024</u>

ಪಿರ್ಯಾದುದಾರರು ಃ ರಾಜ್ಯದ ಪರವಾಗಿಃ ಮೂಡಬಿದ್ರೆ ಪೊಲೀಸ್ ಠಾಣೆ

-ವಿರುದ್ಧ-

ಆರೋಪಿತರು ಃ ಸಂದೀಪ್, 34 ವರ್ಷ

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 240(2) ರಡಿ ಆರೋಪಿಯ ಹೇಳಿಕೆ</u>**

ಪ್ರಶ್ನೆ 1ಃ ನಿಮ್ಮ ವಿರುದ್ಧ ಮಾಡಲಾಗಿರುವ ಆಪಾದನೆಯ ಸಾರವನ್ನು ಓದಿ ವಿವರಿಸಿ ಹೇಳಿದಾಗ ಅರ್ಥವಾಯಿತೇ?

<u>ಉತ್ತರಃ</u> ಹೌದು

ಪ್ರಶ್ನೆ2ಃ ನೀವು ಮೇಲ್ಕಂಡ ಆರೋಪಣೆಯನ್ನು ಒಪ್ಪಿಕೊಳ್ಳಲು ಇಚ್ಛಿಸುತ್ತೀರಾ ಅಥವಾ ವಿಚಾರಣೆಯಾಗಬೇಕೋ?

<u>ಉತ್ತರಃ</u> ವಿಚಾರಣೆಯಾಗಬೇಕು

(ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ಅರ್ಥವಾಗುವ ಕನ್ನಡ ಭಾಷೆಯಲ್ಲಿ ಓದಿ ಹೇಳಿದ್ದು, ಆತನು ನೀಡಿದ ಉತ್ತರವನ್ನು ಮುಕ್ತ ನ್ಯಾಯಾಲಯದಲ್ಲಿ ಯಥಾವತ್ತಾಗಿ ದಾಖಲಿಸಿರುತ್ತೇನೆ)

ಸಹಿ/-

ದಿನಾಂಕಃ 16-10-2024

**(ಕಾವೇರಮ್ಮ ಎಂ.)**
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಮೂಡಬಿದ್ರೆ